ಳು ತುಂಬಿರುವ ಆನೆ ತಡೆ ಕಂದಕಗಳನ್ನು ಸುಸ್ಥಿತಿಯಲ್ಲಿಡಲು ಹೂಳನ್ನು ಎತ್ತುವ ಯಗಾರಿ ಕೈಗೊಳ್ಳಲಾಗುತ್ತಿದೆ. 2009–10ನೇ ಸಾಲಿನಲ್ಲಿ ಸುಮಾರು 50.00 ಕಿ.ಮೀ. ನಷ್ಟು ಆನೆ ಕಂದಕವನ್ನು ದುರಸ್ಥಿ ಪಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

594 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್.(ಗುಂಡ್ಲುಪೇಟೆ)
14–07–2009 ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು

ಅ) ಅರಣ್ಯದಂಚಿನ ಪ್ರದೇಶದ ರೈತರು ಕಂದಾಯ ಭೂಮಿಯಲ್ಲಿ ಬೆಳೆದ ಬೆಳೆಗಳನ್ನು ಕಾಡು ಪ್ರಾಣಿಗಳು ನಾಶ ಮಾಡಿದಾಗ ನೀಡಲಾಗುತ್ತಿರುವ ಪರಿಹಾರ ಮೊತ್ತ ಎಷ್ಟು (ಪ್ರತ್ಯೇಕವಾಗಿ ಪ್ರಮುಖ ಬೆಳೆಗಳಿಗೆ ನಿಗಧಿಪಡಿಸಿರುವ ಮೊತ್ತ);

ಕಾಡು ಪ್ರಾಣಿಗಳಿಂದ ಉಂಟಾಗುವ ಬೆಳೆ ಹಾನಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಮುಖ ಬೆಳೆಗಳಿಗೆ ಪ್ರತ್ಯೇಕವಾಗಿ ಬೆಲೆ ನಿಗಧಿಪಡಿಸಿ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ. (ಅನುಬಂಧ–1)

ಆ) ನೀಡಲಾಗುತ್ತಿರುವ ಪರಿಹಾರ ಮೊತ್ತ ಬಹಳ ಕಡಿಮೆ ಇದ್ದು, ಇತ್ತೀಚಿನ ವೈಜ್ಞಾನಿಕ ದರದ ಆಧಾರದ ಮೇಲೆ ಪರಿಹಾರ ಮೊತ್ತ ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ;

ಇ) ಹಾಗಿದ್ದರೆ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಇತ್ತೀಚೆಗಷ್ಟೆ ಬೆಳೆ ಪರಿಹಾರದ ಮೊತ್ತವನ್ನು ಪರಿಷ್ಕರಿಸಿ ಆದೇಶ ಸಂಖ್ಯೆ ಅಪಜೀ 162 ಎಫ್‌ಡಿಬ್ಲ್ಯುಎಲ್ 2008 ದಿನಾಂಕ: 05–06–2009ನ್ನು ಹೊರಡಿಸಿದೆ. (ಅನುಬಂಧ–2)

ಅನುಬಂಧ–1
ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 162 ಎಫ್‌ಡಬ್ಲ್ಯುಎಲ್ 2008 ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 05–06–2009.

ಇಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಇವರಿಗೆ,
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ),
ಅರಣ್ಯಭವನ, ಮಲ್ಲೇಶ್ವರಂ,
ಬೆಂಗಳೂರು.

ಮಾನ್ಯರೆ,

ವಿಷಯ: ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆನಾಶಗಳಿಗೆ ನೀಡಲಾಗುತ್ತಿರುವ ದಯಾತ್ಮಕ ಧನವನ್ನು ನಿಗಧಿಪಡಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಸಿ2/ಸಿಡಬ್ಲ್ಯುಎಲ್/ಸಿಆರ್–39/2007–08, ದಿನಾಂಕ: 05–08–2008.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಉಲ್ಲೇಖಿತ ಪತ್ರದಲ್ಲಿ ಕೋರಿರುವಂತೆ ವನ್ಯಪ್ರಾಣಿಗಳಿಂದ ಉಂಟಾದ ಬೆಳೆ ನಾಶಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಬೆಳೆಗಳಿಗೆ ಅವುಗಳ ಮುಂದೆ ಸೂಚಿಸಿದಂತೆ ಪ್ರತಿ ಬೆಳೆಗೆ ದರ ಪರಿಷ್ಕರಿಸಿ ನಿಗಧಿಪಡಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ ಎಂದು ತಿಳಿಸಲು ನಿರ್ದೇಶಿತಳಾಗಿದ್ದೇನೆ:–

ಕ್ರ. ಸಂ.	ಪದಾರ್ಥದ ಹೆಸರು	ಬೆಲೆ/ಕ್ವಿಂಟಾಲ್ (ರೂ.ಗಳಲ್ಲಿ)
1.	ಭತ್ತ	660/–
2.	ಜೋಳ	620/–
3.	ಮೆಕ್ಕೆ ಜೋಳ	620/–
4.	ಸಜ್ಜೆ	600/–
5.	ರಾಗಿ	600/–
6.	ತೊಗರಿ	1550/–
7.	ಹೆಸರು	1700/–
8.	ಉದ್ದು	1700/–
9.	ಕಬ್ಬು	81.18
10.	ಹತ್ತಿ	1985/–
11.	ಶೇಂಗಾ(ನೆಲಗಡಲೆ)	1550/–
12.	ಸೂರ್ಯಕಾಂತಿ	1510/–
13.	ಸೋಯಾ	980/–
14.	ಎಳ್ಳು	1580/–
15.	ಹುಚ್ಚೆಳ್ಳು	1240/–
16.	ಕಂಬು	600/–
17.	ಬಟಾಣಿ	2300/–
18.	ಹಲಸಂದೆ	1200/–
19.	ಅವರೆ	1121/–

20.	ಹಾಗಲಕಾಯಿ	900/–
21.	ಬದನೆಕಾಯಿ	400/–
22.	ನುಗ್ಗೆಕಾಯಿ	1600/–
23.	ಗೆಡ್ಡೆಕೋಸು	500/–
24.	ಬೆಂಡೆಕಾಯಿ	600/–
25.	ಮೂಲಂಗಿ	350/–
26.	ಹೀರೆಕಾಯಿ	500/–
27.	ಪಡವಲಕಾಯಿ	500/–
28.	ತೊಂಡೆಕಾಯಿ	600/–
29.	ಹೂಕೋಸು	400/–
30.	ಬೀಟ್‌ರೂಟ್	819/–
31.	ಈರುಳ್ಳಿ	654/–
32.	ಟಮೊಟೋ	294/–
33.	ಆಲೂಗೆಡ್ಡೆ	1067/–
34.	ಕ್ಯಾರೆಟ್	1114/–
35.	ಬೀನ್ಸ್	1195/–
36.	ಅರಿಶಿನ	2100/–
37.	ಕರಿಬೂಜ(ಕಲ್ಲಂಗಡಿ)	700/–
38.	ಹಸಿಮೆಣಸಿನಕಾಯಿ	977/–
39.	ದಪ್ಪ ಮೆಣಸಿನಕಾಯಿ	1000/–
40.	ಶುಂಠಿ	1935/–
41.	ನವಣೆ	1050/–
42.	ಎಲೆಕೋಸು	348/–
43.	ಕೊತ್ತಂಬರಿ	1780/–
44.	ಕಾಫಿ	100/– ಒಂದು ಗಿಡಕ್ಕೆ
45.	ಏಲಕ್ಕಿ	400/– ಕೆ.ಜಿ.ಗೆ
46.	ಮೆಣಸು	90/– ಕೆ.ಜಿ.ಗೆ
47.	ಕಿತ್ತಲೆ i) 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಿಡಗಳಿಗೆ ii) 5 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಗಿಡಗಳಿಗೆ	 100/– ಒಂದು ಗಿಡಕ್ಕೆ 160/– ಒಂದು ಗಿಡಕ್ಕೆ
48.	ಅಡಿಕೆ/ತೆಂಗು	

P-II-80

	i) 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗಿಡಗಳಿಗೆ ii) ವರ್ಷ 7ರಿಂದ 9 ವರ್ಷ ವಯಸ್ಸಿನ ಮರ ಗಿಡಗಳಿಗೆ iii) 10 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಗಿಡಗಳಿಗೆ	200/- ಒಂದು ಗಿಡಕ್ಕೆ 400/- ಒಂದು ಗಿಡಕ್ಕೆ 1000/- ಒಂದು ಗಿಡಕ್ಕೆ
49.	ಬಾಳೆ	80/- ಒಂದು ಗಿಡಕ್ಕೆ
50.	ಹರಳು	2302/- ಒಂದು ಕ್ವಿಂಟಾಲ್‌ಗೆ
51.	ಮೆಂತ್ಯ ಸೊಪ್ಪು	2/- ಒಂದು ಕಟ್ಟಿಗೆ
52.	ನಿಂಬೆ	5/- ಪ್ರತಿ ಗಿಡಕ್ಕೆ
53.	ಗಜ ನಿಂಬೆ	12/- ಪ್ರತಿ ಗಿಡಕ್ಕೆ
54.	ಚೆಂಡು ಮಲ್ಲಿಗೆ (ದಪ್ಪದು)	100/- ಕೆ.ಜಿ.ಗೆ
55.	ಕಾಕಡ ಹೂವು	40/- ಕೆ.ಜಿ.ಗೆ
56.	ಕನಕಾಂಬರ	80-120 ಕೆ.ಜಿ.ಗೆ
57.	ಸೇವಂತೆ	10-12 ಪ್ರತಿ ಮಾರು

ಸದರಿ ಪ್ರಸ್ತಾವನೆಗೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/153/ವೆಚ್ಚ-5/09, ದಿನಾಂಕ: 23-03-2009ರಲ್ಲಿ ಆರ್ಥಿಕ ಇಲಾಖೆಯ ಸಹಮತಿ ಪಡೆಯಲಾಗಿದೆ.

ತಮ್ಮ ನಂಬುಗೆಯ,

ಅನುಬಂಧ-2

ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 162 ಎಫ್‌ಡಬ್ಲ್ಯುಎಲ್ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 05-06-2009.

ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ: ಅಪಜೀ 259 ಎಫ್‌ಡಬ್ಲ್ಯುಎಲ್ 2006. ದಿನಾಂಕ: 17-01-2007ರ ಕ್ರಮ ಸಂಖ್ಯೆ: Iರಲ್ಲಿ ಕಾಡು ಪ್ರಾಣಿಗಳಿಂದ ಬೆಳೆ ಹಾನಿಯಾದ ಪ್ರಕರಣಗಳಿಗೆ ಮಂಜೂರು ಮಾಡಬಹುದಾದ ಪರಿಹಾರ ಧನವನ್ನು ಈ ಕೆಳಗಿನಂತೆ ಪರಿಷ್ಕರಿಸಿ ತಿದ್ದುಪಡಿ ಮಾಡಲಾಗಿದೆ.

ಕ್ರ.ಸಂ.	ವಿವರಗಳು	ವಿತರಿಸಲಾಗುವ ಕನಿಷ್ಠ ಎಕ್ಸ್‌ಗ್ರೇಶಿಯಾ	ವಿತರಿಸಲಾಗುವ ಗರಿಷ್ಠ ಎಕ್ಸ್‌ಗ್ರೇಶಿಯಾ
1.	ರೂ. 5,800/– ವರೆಗಿನ ಮೊತ್ತದ ಬೆಳೆನಾಶಕ್ಕೆ ಭೂ ಮಾಲೀಕರಿಗೆ ಮಂಜೂರು ಮಾಡುವ ದಯ್ಯಾತಕಧನ (ಎಕ್ಸ್‌ಗ್ರೇಶಿಯಾ)	ಬೆಳೆ ನಾಶದ ಪೂರ್ಣ ಮೊತ್ತ	ಬೆಳೆ ನಾಶದ ಪೂರ್ಣ ಮೊತ್ತ
2.	ರೂ.5,801/– ರಿಂದ ರೂ.29,000/– ವರೆಗಿನ ಮೊತ್ತದ ಬೆಳೆ ನಾಶಕ್ಕೆ ಭೂ ಮಾಲೀಕರಿಗೆ ಮಂಜೂರು ಮಾಡುವ ದಯ್ಯಾತಕಧನ (ಎಕ್ಸ್‌ಗ್ರೇಶಿಯಾ)	ರೂ.5,820/– (ರೂ. ಐದು ಸಾವಿರದ ಎಂಟುನೂರ ಇಪ್ಪತ್ತು ಮಾತ್ರ) ರೂ.5,820/–ಕ್ಕೂ ಮೀರಿದ ಬೆಳೆನಷ್ಟದ ಮೊತ್ತದ ಶೇ.50 ರಷ್ಟು	ಪ್ರತಿ ಪ್ರಕರಣಕ್ಕೆ ಗರಿಷ್ಠ ಮೊತ್ತ ರೂ.17,500/– (ರೂ. ಹದಿನೇಳು ಸಾವಿರದ ಐದುನೂರು ಮಾತ್ರ)
3.	ರೂ.29,000/–ಮತ್ತು ಅದಕ್ಕೂ ಮೇಲ್ಪಟ್ಟ ಮೊತ್ತದ ಬೆಳೆ ನಾಶಕ್ಕೆ ಭೂ ಮಾಲೀಕರಿಗೆ ಮಂಜೂರು ಮಾಡುವ ದಯ್ಯಾತಕಧನ (ಎಕ್ಸ್‌ಗ್ರೇಶಿಯಾ)	ರೂ.17,500/– (ರೂ. ಹದಿನೇಳು ಸಾವಿರದ ಐದುನೂರು ಮಾತ್ರ) ರೂ.29,000/–ಕ್ಕೂ ಮೀರಿದ ಬೆಳೆನಷ್ಟದ ಮೊತ್ತದ ಶೇ.30 ರಷ್ಟು	ಪ್ರತಿ ಪ್ರಕರಣಕ್ಕೆ ಗರಿಷ್ಠ ಮೊತ್ತ ರೂ.45,000/– (ರೂ. ನಲ್ವತ್ತೈದು ಸಾವಿರದ ಐದುನೂರು ಮಾತ್ರ)

ಮುಂದುವರೆದು ಆದೇಶ ಸಂಖ್ಯೆ: ಅಪಜೀ 52 ಎಫ್‌ಡಬ್ಲ್ಯುಎಲ್ 96. ದಿನಾಂಕ: 12–02–2002ರಲ್ಲಿ ಬೆಳೆ ನಾಶ ಪ್ರಕರಣಗಳಿಗೆ ಸಂಬಂಧಿಸಿದಂತೆ ಎಕ್ಸ್‌ಗ್ರೇಶಿಯಾ ಮೊತ್ತಗಳನ್ನು ನಿಗಧಿಪಡಿಸಿ ವಿತರಿಸಲು ಅರಣ್ಯ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರವನ್ನು ಈ ತಿದ್ದುಪಡಿಯ ಮೂಲಕ ಪರಿಷ್ಕರಿಸಿದ್ದು, ರೂ.25,000/–ಕ್ಕಿಂತ ಮೇಲ್ಪಟ್ಟು ರೂ.1,00,000/–ಗಳ ವರೆಗೆ ಪರಿಹಾರ ಧನವನ್ನು ನಿಗಧಿಪಡಿಸಿ, ಮಂಜೂರು ಮಾಡುವ ಅಧಿಕಾರವನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಹಾಗೂ ರೂ.1,00,000/–ಗಳಿಗಿಂತ ಹೆಚ್ಚು ನಾಶವಾದ ಬೆಳೆಗಳ ಮೌಲ್ಯಮಾಪನ ಮಾಡಿ ಪರಿಹಾರಧನ ನಿಗಧಿಪಡಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ಸದರಿ ಅಧಿಕಾರಿಗಳು ಘಟನೆ ನಡೆದ ಸ್ಥಳಗಳಿಗೆ ಖುದ್ದಾಗಿ ಭೇಟಿ ನೀಡಿ ಮಹಜರ್ ನಡೆಸಿ ಪರಿಹಾರ ಧನವನ್ನು ನಿಗಧಿಪಡಿಸಿ ಪಾವತಿ ಮಾಡತಕ್ಕದ್ದು.

ಸದರಿ ಪ್ರಸ್ತಾವನೆಗೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/153/ವೆಚ್ಚ–5/2009, ದಿನಾಂಕ: 23–03–2009ರ ಪ್ರಕಾರ ಆರ್ಥಿಕ ಇಲಾಖೆಯ ಸಹಮತಿ ಪಡೆದು ಹೊರಡಿಸಲಾಗಿದೆ.

<u>ಕರ್ನಾಟಕ ವಿಧಾನಸಭೆ</u>
<u>13ನೇ ವಿಧಾನ ಸಭೆ</u>
<u>3ನೇ ಅಧಿವೇಶನ</u>

595 ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್.(ಗುಂಡ್ಲುಪೇಟೆ)
ಡಾ. ಎಸ್. ಆಚಾರ್ಯ ಮಾನ್ಯ ಗೃಹ ಸಚಿವರು

ಅ) ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಬೆಂಗಳೂರು ಗ್ರಾಮದ ಹೊರ ಪೊಲೀಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಹೌದು.

ಆ) ಎಷ್ಟು ವರ್ಷಗಳಿಂದ ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ?

2009ನೇ ಸಾಲಿನಲ್ಲಿ ಡಿಜಿ & ಐಜಿಪಿ ರವರು ರಾಜ್ಯದ ವಿವಿಧ ಸ್ಥಳಗಳಲ್ಲಿ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಲು ಕಳುಹಿಸಿರುವ ಕ್ರೋಢೀಕೃತ ಪ್ರಸ್ತಾವನೆಯಲ್ಲಿ ಇದು ಸೇರಿರುತ್ತದೆ.

ಇ) ಸದರಿ ಪೊಲೀಸ್ ಠಾಣೆಯನ್ನು ಶೀಘ್ರ ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಕ್ರೋಢೀಕೃತ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

<u>ಕರ್ನಾಟಕ ವಿಧಾನಸಭೆ</u>

596 ಶ್ರೀ ಶ್ರೀನಿವಾಸ (ವಾಸು) ಎಸ್.ಆರ್.(ಗುಬ್ಬಿ)
ಎಸ್. ಸುರೇಶ್ ಕುಮಾರ್ ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು.

ಅ) ತುಮಕೂರು ಜಿಲ್ಲೆ, ಗುಬ್ಬಿ ಪಟ್ಟಣಕ್ಕೆ ಯು.ಜಿ.ಡಿ. ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಪರಿಶೀಲನೆಯಲ್ಲಿದೆ.

ಆ) ಹಾಗಿದ್ದಲ್ಲಿ ಯು.ಜಿ.ಡಿ. ಸರ್ವೆ ಕಾರ್ಯವು ಮುಗಿದಿದೆಯೇ;

ಸರ್ವೆ ಕಾರ್ಯ ಮುಗಿದಿದೆ.